22-2017

**ತಃಖ್ತೆ ನಂ – 5**

**ದಿನಾಂಕ : 25-8-2019ರಂದು ಸೇರಿದ ಸಾಮಾನ್ಯ ಸಭೆಯಲ್ಲಿ ಸ್ವೀಕರಿಸಿದ ಉಪನಿಯಮದ ತಿದ್ದುಪಡಿ ನಕಲುಗಳು**

| ತಿದ್ದುಪಡಿಯಾದ ಉಪನಿಯಮ ನಂ | ತಿದ್ದುಪಡಿ ಸ್ವೀಕರಿಸಿದ ನಂತರ ಆಗುವ ಸದರಿ ಉಪನಿಯಮದ ಪೂರ್ಣ ವಿವರ |
|---|---|
| 3 | **ಸಹಕಾರಿಯ ಕಾರ್ಯ ಕ್ಷೇತ್ರದ ವ್ಯಾಪ್ತಿ :** ಸಹಕಾರಿಯ ಕಾರ್ಯ ಕ್ಷೇತ್ರದ ವ್ಯಾಪ್ತಿಯು ಶಿವಮೊಗ್ಗ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆ, ದಾವಣಗೆರೆ ಜಿಲ್ಲೆ ಹಾಗೂ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯನ್ನು ವ್ಯಾಪ್ತಿಸಿರುತ್ತದೆ. |
| 45.ಅ | **ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯ:**<br>1. ಪದಾಧಿಕಾರಿಗಳ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಆ ಪದಾಧಿಕಾರಿ ಪದವನ್ನು ವಹಿಸಿಕೊಂಡ ದಿನಾಂಕದಿಂದ ಎರಡು ವರ್ಷಗಳ ತರುವಾಯ ಮಾತ್ರ ಮಂಡಿಸತಕ್ಕದ್ದು. ಒಂದುವೇಳೆ ಅವಿಶ್ವಾಸ ನಿರ್ಣಯಕ್ಕೆ ಒಮ್ಮೆ ಸೋಲುಂಟಾದಲ್ಲಿ ಹೊಸ ಅವಿಶ್ವಾಸ ನಿರ್ಣಯವನ್ನು ಮುಂದಿನ ಒಂದು ವರ್ಷದ ಅವಧಿಯವರೆಗೆ ಮಂಡಿಸತಕ್ಕದ್ದಲ್ಲ. ಸಹಕಾರಿಯ ಮೂರನೇ ಒಂದರಷ್ಟು ಚುನಾಯಿತ ಆಡಳಿತ ಮಂಡಳಿ ಸದಸ್ಯರಿಂದ ಕೋರಿಕೆ ಸಲ್ಲಿಕೆಯಾಗದಿದ್ದಲ್ಲಿ ಅಂಥ ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕದ್ದಲ್ಲ.<br>**2.** ಓರ್ವ ಪದಾಧಿಕಾರಿಯು, ತನ್ನ ವಿರುದ್ಧ ಮಂಡಿಸಲ್ಪಟ್ಟ ಅವಿಶ್ವಾಸ ವ್ಯಕ್ತಪಡಿಸುವ ನಿರ್ಣಯವು, ಆ ಉದ್ದೇಶಕ್ಕಾಗಿಯೇ ಕರೆಯಲ್ಪಟ್ಟ ವಿಶೇಷ ಸಭೆಯಲ್ಲಿ ಹಾಜರಿದ್ದ ಮೂರನೇ ಎರಡರಷ್ಟು ಚುನಾಯಿತ ನಿರ್ದೇಶಕರ ಬಹುಮತದಿಂದ ಅಂಗೀಕರಿಸಲ್ಪಟ್ಟಲ್ಲಿ, ತನ್ನ ಪದವನ್ನು ತ್ಯಜಿಸಿದ್ದಾನೆಂದು ಭಾವಿಸತಕ್ಕದ್ದು.<br>3. ಅವಿಶ್ವಾಸ ನಿರ್ಣಯಕ್ಕಾಗಿನ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು. |
| 67 | **ಸಿಬ್ಬಂದಿಗಳ ನೇಮಕಾತಿ ಮತ್ತು ಸೇವಾ ಷರತ್ತುಗಳು:**<br>**ಅ) ಸಹಕಾರಿಯ ಸಿಬ್ಬಂದಿಯ ನೇಮಕಾತಿ:–**<br>1) ಸಾಮಾನ್ಯ ಸಭೆಯಿಂದ ಅನುಮೋದನೆಯಾದ ವೃಂದ ಸಂಖ್ಯೆ ವೇತನ ಶ್ರೇಣಿಯ ಮಿತಿಗೊಳಪಟ್ಟು ನೇಮಕಾತಿಯನ್ನು ಈ ಬಗ್ಗೆ ಆಡಳಿತ ಮಂಡಳಿಯಿಂದ ರಚಿತವಾದ ಸಮಿತಿಯ ಉಸ್ತುವಾರಿಯಲ್ಲಿ ಮಾಡಬೇಕು. ಈ ಸಮಿತಿಯ ರಚನೆಯು ಈ ಕೆಳಗಿನವರನ್ನು ಒಳಗೊಂಡಿರುತ್ತದೆ<br>1.ಸಹಕಾರಿಯ ಅಧ್ಯಕ್ಷರು –ಅಧ್ಯಕ್ಷರು<br>2.ಸಹಕಾರಿಯ ಆಡಳಿತ ಮಂಡಳಿಯಿಂದ ಆಯ್ಕೆ ಮಾಡಿಕೊಂಡ ಒಬ್ಬ ಸದಸ್ಯರು –ಸದಸ್ಯರು |

ಮುಖ್ಯ ಕಾರ್ಯನಿರ್ವಹಣಾಧಿಕಾರಿ

| | |
|---|---|
| | 3. ಸಂಯುಕ್ತ ಸಹಕಾರಿಯ ಒಬ್ಬ ಪ್ರತಿನಿಧಿ. –ಸದಸ್ಯರು<br>4. ಸಹಕಾರಿಯಿಂದ ನಾಮಕರಣಗೊಂಡ ಸಹಕಾರ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಬಾಹ್ಯ ತಜ್ಞರು –ಸದಸ್ಯರು<br>5. ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ –ಸದಸ್ಯ ಕಾರ್ಯದರ್ಶಿ<br>2) ಸಮಿತಿಯ ಸಭೆಗೆ ಅವಶ್ಯ ಕೋರಂ ಕನಿಷ್ಠ ಮೂರು ಇರತಕ್ಕದ್ದು.<br>1 ಪ್ರತಿಯೊಬ್ಬ ನೌಕರರು ಸಾಮಾನ್ಯಸಭೆಯಿಂದ ಅನುಮೋದಿಸಲ್ಪಟ್ಟಂತಹ ಸಿಬ್ಬಂದಿ ಸೇವಾನಿಯಮಗಳಲ್ಲಿ ಸೂಚಿಸಿದ ಕನಿಷ್ಠ ಅರ್ಹತೆಗಳನ್ನು ಹೊಂದಿರಬೇಕು.<br>2 ನೇಮಕಾತಿ ಸಮಿತಿಯು ಯಾವುದೇ ನೇಮಕಾತಿ ಮಾಡುವಾಗ ಸಾಮಾನ್ಯ ಸಭೆಯಿಂದ ಅನುಮೋದಿತವಾದ ಸಿಬ್ಬಂದಿ ಸೇವಾ ನಿಯಮಗಳಲ್ಲಿ ಹೇಳಿರುವ ನೇಮಕಾತಿ ನಿಬಂಧನೆಗಳನ್ನು, ವಿಧಿ ವಿಧಾನಗಳನ್ನು ತಪ್ಪದೇ ಅನುಸರಿಸತಕ್ಕದ್ದು.<br>3 ಬಾಹ್ಯ ತಜ್ಞರೂ ಸೇರಿದಂತೆ ನೇಮಕಾತಿ ಸಮಿತಿಯ ಬಹುಮತವಿಲ್ಲದೇ ಯಾವ ವ್ಯಕ್ತಿಯನ್ನೂ ಸಿಬ್ಬಂದಿಯಾಗಿ ನೇಮಕಾತಿ ಮಾಡತಕ್ಕದ್ದಲ್ಲ. |
| **42** | **ಮಂಡಲಿಯ ರಚನೆ :**<br>1. ಸಹಕಾರಿಯ ವ್ಯವಸ್ಥಾಪನೆಯ ಅಧಿಕಾರವು, ಅಧಿನಿಯಮ, ನಿಯಮ ಮತ್ತು ಉಪವಿಧಿಗಳಿಗೆ ಅನುಗುಣವಾಗಿ ಎಲ್ಲಾ ಕ್ಷೇತ್ರಗಳಿಂದ ಚುನಾಯಿತರಾದ ಒಟ್ಟು **17** ಜನ ನಿರ್ದೇಶಕರನ್ನೊಳಗೊಂಡ ಮಂಡಳಿಯಲ್ಲಿರತಕ್ಕದ್ದು.<br>ಈ ಪೈಕಿ ಸಹಕಾರಿಯ ಕಾರ್ಯವ್ಯಾಪ್ತಿಯಲ್ಲಿನ ಎಲ್ಲಾ ಕ್ಷೇತ್ರಗಳಿಂದ ಮಹಿಳಾ ಸದಸ್ಯರಿಗೆ –2 ಸ್ಥಾನ, ಎಸ್ ಸಿ ಸದಸ್ಯರಿಗೆ– 1 ಸ್ಥಾನ, ಎಸ್ ಟಿ ಸದಸ್ಯರಿಗೆ –1 ಸ್ಥಾನ, ಹಿಂದುಳಿದ ವರ್ಗದ ಸದಸ್ಯರಿಗೆ –2 ಸ್ಥಾನ ಮೀಸಲಿಡತಕ್ಕದ್ದು. ಈ ಆರು ಮೀಸಲು ಸ್ಥಾನಗಳಿಗೆ ಕಾರ್ಯವ್ಯಾಪ್ತಿಯಲ್ಲಿನ ಎಲ್ಲಾ ಕ್ಷೇತ್ರದ ಸದಸ್ಯರುಗಳೊಳಗೆ ಚುನಾಯಿತರಾದ ನಿರ್ದೇಶಕರಿರತಕ್ಕದ್ದು.<br>ಉಳಿದ 11–ಸ್ಥಾನಗಳಲ್ಲಿ ಈ ಕೆಳಕಂಡಂತೆ ಸಹಕಾರಿಯ ಕಾರ್ಯವ್ಯಾಪ್ತಿಯ ಸಾಮಾನ್ಯವರ್ಗದ ಸದಸ್ಯರುಗಳಿಂದ ಚುನಾಯಿತ ನಿರ್ದೇಶಕರಿರತಕ್ಕದ್ದು.<br>1. ಶಿವಮೊಗ್ಗ ತಾಲ್ಲೂಕು 3<br>2. ಉಳಿದ ಆರು ತಾಲ್ಲೂಕುಗಳಿಂದ ತಲಾ ಒಂದು ಸ್ಥಾನದಂತೆ ಒಟ್ಟು 6<br>3. ಬೆಂಗಳೂರು ನಗರ ಮತ್ತು ಗ್ರಾಮಾಂತರ 1<br>4. ಚಿಕ್ಕಮಗಳೂರು 1<br>ಮೇಲ್ಕಂಡ 11 ಸ್ಥಾನಗಳಲ್ಲಿ ಯಾವುದೇ ನಿರ್ದಿಷ್ಟ ಸ್ಥಾನಕ್ಕೆ ಯಾರೂ ಸ್ಪರ್ಧಿಸದೇ ಇದ್ದಲ್ಲಿ ಸಹಕಾರಿಯ ಕಾರ್ಯ ವ್ಯಾಪ್ತಿಯಲ್ಲಿರುವ ಸಾಮಾನ್ಯ ವರ್ಗದ ಸದಸ್ಯರು ಅಂತಹ ಸ್ಥಾನಕ್ಕೆ ಸ್ಪರ್ಧಿಸಬಹುದಾಗಿರುತ್ತದೆ. |

ಮುಖ್ಯ ಕಾರ್ಯನಿರ್ವಹಣಾಧಿಕಾರಿ

| | |
|---|---|
| | 2)ಬ್ಯಾಂಕಿಂಗ್/ ವ್ಯವಸ್ಥಾಪನೆ/ಹಣಕಾಸು/ಕಾಯಿದೆ/ಸಹಕಾರಿಯ ಚಟುವಟಿಕೆ ಮತ್ತು ಉದ್ದೇಶಗಳಿಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಅನುಭವವಿರುವ ಇಬ್ಬರು ತಜ್ಞರನ್ನು ಮಂಡಳಿಯ ರಚನೆಯ ನಂತರ ಸಹಮತದಿಂದ (ಕೋ–ಆಪ್ಟ್) ವೃತ್ತಿಪರ ನಿರ್ದೇಶಕರನ್ನಾಗಿ ಸೇರಿಸಿಕೊಳ್ಳತಕ್ಕದ್ದು ಮತ್ತು ಅಂತಹ ನಿರ್ದೇಶಕರು ಮಂಡಲಿಯ ಪದಾಧಿಕಾರಿಗಳಾಗಲು ಹಾಗೂ ಮಂಡಳಿಯ ಚುನಾವಣೆಯಲ್ಲಾಗಲಿ, ಯಾವುದೇ ಸಭೆಗಳಲ್ಲಾಗಲೀ ಮತ ನೀಡುವ ಹಕ್ಕು ಹೊಂದಿರುವುದಿಲ್ಲ. ಮಂಡಳಿಯ ಸಭಾ ಕೋರಂಗೆ ಈ ವರ್ಗದ ನಿರ್ದೇಶಕರನ್ನು ಹೊರತುಪಡಿಸಿ ಲೆಕ್ಕ ಹಾಕತಕ್ಕದ್ದು. |

ದಿನಾಂಕ : 31–8–2019

ಸ್ಥಳ : ಶಿವಮೊಗ್ಗ

ಮುಖ್ಯ ಕಾರ್ಯನಿರ್ವಾಹಕರು
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ.,
ವಿನೋಬನಗರ ಶಿವಮೊಗ್ಗ-577 204.

ಆಡಳಿತ ಮಂಡಳಿ ಸದಸ್ಯರು

ಆಡಳಿತ ಮಂಡಳಿ ಸದಸ್ಯರು

ಅಧ್ಯಕ್ಷರು
ಅಧ್ಯಕ್ಷರು
ವಿಪ್ರ, ವಿವಿಧೋದ್ದೇಶ ಸೌಹಾರ್ದ ಸಹಕಾರಿ (ನಿ)
ವಿನೋಬನಗರ, ಶಿವಮೊಗ್ಗ-577 204

ಈ ಕಛೇರಿ ಆದೇಶ ಸಂ: ಆರ್‌ಸಿಎಸ್/ಆರ್‌ಎಸ್‌ಆರ್/ಸಿ ಹಾರ್ಡ್/ಬಿಎಸ್/105/2019-20, ದಿ: 3-12-2019 ರಲ್ಲಿ ಉಪವಿಧಿ ಸಂ: 03, 45(ಬಿ), 67 ಹಾಗೂ 48ನ್ನು ಅನುಬಂಧ-05 ರಂತೆ ಅನುಮೋದಿಸಿದೆ.

ಸಹಕಾರಿಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು 3/12/19